**CC 2159/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್** 2159/2025

**ಸಿ ಡಬ್ಲ್ಯೂ** -5
**ಪಿ ಡಬ್ಲ್ಯೂ** -5

| | |
|---|---|
| **ಸಾಕ್ಷಿಯ ಹೆಸರು -** | **ಅಮೀನ್** |
| **ತಂದೆಯ ಹೆಸರು -** | **ಮಕ್ತುಮಂ ಸಾಬ್** |
| **ವಯಸ್ಸು -** | 42 **ವರ್ಷಗಳು** |
| **ಉದ್ಯೋಗ -** | **ಗುಜರಿ ವ್ಯಾಪಾರ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 18-03-2026 **ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಜಪ್ತು ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯ ಅಸಲು ಪ್ರತಿ ಗುನ್ನೆ ನಂಬರ್ **197/2024** ರಲ್ಲಿ ಹಾಜರುಪಡಿಸಲಾಗಿದ್ದು, ಈ ಪ್ರಕರಣದಲ್ಲಿ ದೃಢೀಕೃತ ನಕಲನ್ನು ಹಾಜರುಪಡಿಸಲಾಗಿದೆ. ಪಂಚನಾಮೆಯನ್ನು ಈಗಾಗಲೇ ನಿಪಿಃ **7** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **7(ಬಿ)** ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮಾಡಿದ್ದೆ. ಸದರಿ ಪಂಚಾನಮೆಗೆ ಯಾವ ಕಾರಣಕ್ಕೆ ಸಹಿ ಮಾಡಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಕರೆದು ಸಹಿ ಮಾಡು ಎಂದು ಹೇಳಿದ್ದರಿಂದ ಆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಮುದ್ದೆಮಾಲು ಜಪ್ತು ಪಡಿಸಿಕೊಂಡಿಲ್ಲ. ಆರೋಪಿತರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

CC 2159/2025

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 29-12-2024 ರಂದು ಮಧ್ಯಾಹ್ನ 3.00 ಗಂಟೆಗೆ ನನ್ನನ್ನು ಮತ್ತು ಚಾಸಾ -4 ರವರನ್ನು ಠಾಣಗೆ ಕರೆಯಿಸಿ ಗುನ್ನೆ ಸಂಖ್ಯೆ 197/2024 ರಲ್ಲಿ ವಶಕ್ಕೆ ಪಡಯಲಾಗಿದ್ದ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನಮಗೆ ತೋರಿಸಿದ್ದರು ಅಂದರೆ ಸಂರಿಲಲ. ಸದರಿ ಆರೋಪಿ ತಾನು ಮತ್ತು ನ್ಯಾಯಾಲದ ಮುಂದೆ ಇರುವ 2 ನೇ ಆರೋಪಿ ಹಿಂದಿನ ದಿನ ಅಂದರೆ ದಿಃ 28-12-2024 ರಂದುಬೆಳಿಗ್ಗೆ 5.30 ಗಿಂದ 5.40 ರವರಗೆ ದೇವಾಂಗ ಪೇಟೆಯಲ್ಲಿರುವ ಸಣ್ಣ ಶಂಕ್ರಮ್ಮನ ಗಡಿಯ ಹತ್ತಿರ ಒಬ್ಬ ಅಜ್ಜಿಯ ಕೊರಳಲಿಲ್ಲದ್ದ ಬಂಗಾರದ ಸರವನ್ನು ಕಿತ್ತುಕೊಂಡು ಹೋಗಿದ್ದಾಗಿ, 2 ನೇ ಆರೋಪಿ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದುದ್ದಾಗಿ ನಮ್ಮ ಮುಂದೆ ತಿಳಿಸಿದ್ದ ಅಂದರೆ ಸರಿಯಲ್ಲ. ಸದರಿ ಆರೋಪಿ ಅದೇ ರೀತಿ ಇನ್ನೂ 5 ಸ್ಥಳಗಳಲ್ಲಿ ಕಳ್ಳತನ ಮಾಡಿರುವ ಬಗ್ಗೆ ತಿಳಿಸಿದ್ದ ಅಂದರೆ ಸರಿಯಲ್ಲ. ಪೋಲಿಸರು ವಿಚಾರಿಸಿದಾಗ 1 ನೇ ಆರೋಪಿ ಪ್ರಕರಣದಲ್ಲಿನ ಒಂದು ಚೈನ್ ಅನ್ನು ತೆಗೆದು ಹಾಜರುಪಡಿಸಿದ್ದ ಅಂದರೆ ಸರಿಯಲ್ಲ. ಸದರಿ ಚೈನ್ ಅನ್ನು ಚಾಸಾ -8 ರವರು ಪರೀಕ್ಷಿಸಿ ತೂಕ ಮಾಡಿದಾಗ 10 ಗ್ರಾಂ ಇತ್ತು ಅಂದರೆ ಸರಿಯಲ್ಲ. ಇನ್ನೊಂದು ಪ್ರಕರಣದಲ್ಲಿನ ಚೈನ್ ಅನ್ನು ಸಹ 1 ನೇ ಆರೋಪಿ ಹಾಜರುಪಡಿಸಿದ್ದ ಅಂದರೆ ಸರಿಯಲ್ಲ. ಈ ಬಗ್ಗೆ ಮಧ್ಯಾಹ್ನ 3.00 ರಿಂದ 4.30 ಗಂಟೆಯವರಗೆ ಜಪ್ತು ಪಂಚನಾಮೆ ಮಾಡಿಲಾಗಿತ್ತು ಅಂದರೆ ಸರಿಯಲ್ಲ. ನಿಪಿಃ 7 ಅದೇ ಪಂಚನಾಮೆ ಆಗಿದೆ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ

1 ನೇ ಆರೋಪಿ ಸ್ಥಳದಲ್ಲಿ ಹಾಜರಿದ್ದ ಅಂದರೆ ಸರಿಯಲ್ಲ. ಆಗಲೇ ನಿಪಿಃ 8 ರ ಫೋಟೋಗಳನ್ನು ತೆಗೆಯಲಾಗಿತ್ತು ಅಂದರೆ ಸರಿಯಲ್ಲ.

ನನ್ನ ಸಮಕ್ಷಮ ನಿಪಿಃ 7 ರ ಪಂಚನಾಮೆ ಆಗಿದ್ದರೂ, ನಿಪಿಃ 8 ರ ಫೋಟೋ ತೆಗೆದಿದ್ದರೂ ಮತ್ತು ಮುದ್ದೆಮಾಲನ್ನು ಜಪ್ತು ಪಡಿಸಿಕೊಂಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.